

ಚಿಕ್ಕ ಮನೋಹರ ಮಂಟಪಗಳನ್ನೊಳಗೊಂಡ ಜಪದ ಬಾವಿ

ದೊಡ್ಡಬಸಪ್ಪ ದೇವಾಲಯದ ತಳಹದಿ ಮುಂದೆ ಹೊಯ್ಸಳರ ಕಾಲದಲ್ಲಿ ಪ್ರಾಮುಖ್ಯತೆ ಪಡೆದ ನಕ್ಷತ್ರಾಕಾರದ ಅಡಿಪಾಯದ ವಿನ್ಯಾಸವನ್ನು ಹೊಂದಿರುವುದು ಕುತೂಹಲಕರ. ಹೊಯ್ಸಳರ ಬೇಲೂರು, ಹಳೇಬೀಡು, ಸೋಮನಾಥಪುರ ಮತ್ತಿತರ ದೇವಾಲಯಗಳಂತೆ ಪ್ರದಕ್ಷಿಣ ಪಥವಾಗುವಷ್ಟು ಅಗಲವಾದ ತಳಹದಿಯಿಲ್ಲದಿದ್ದರೂ ನಕ್ಷತ್ರಾಕಾರ ಮಾತ್ರ ಇಡೀ ದೇವಸ್ಥಾನವನ್ನು ಆವರಿಸಿಕೊಂಡಿದೆ. ಕಲ್ಯಾಣಿ ಚಾಲುಕ್ಯ ಶೈಲಿಯಿಂದ ಹೊಯ್ಸಳ ಶೈಲಿಗೆ ಕೈ ದಾಟಿಸುವ ಹೊಣೆಯನ್ನು ಬಳ್ಳಿಗಾವೆಯ ದೇವಾಲಯಗಳೊಂದಿಗೆ ತಾನೂ ಸಮಪ್ರಮಾಣದಲ್ಲಿ ಹೊತ್ತಿದ್ದನ್ನು ಜಗತ್ತಿಗೆ ತಿಳಿಯಪಡಿಸಲೋ ಎಂಬಂತೆ ಡಂಬಳದ ದೊಡ್ಡಬಸಪ್ಪ ದೇವಾಲಯ ಈ ಹಳ್ಳಿಯ ನಡುವೆ ಇಂದಿಗೂ ತನ್ನದೇ ಆದ ವಿಶಿಷ್ಟ ವಾಸ್ತುಶಿಲ್ಪದೊಂದಿಗೆ ರಾರಾಜಿಸುತ್ತಿದೆ.

ದೊಡ್ಡಬಸಪ್ಪ ದೇವಾಲಯದ ಹಿಂಭಾಗಕ್ಕೆ ಇದಕ್ಕಿಂತ ಹಳೆಯದಾಗಿ ತೋರುವ ಕದಂಬ ಶೈಲಿಯ ಮತ್ತು ಜಿನಾಲಯಗಳ ವಿನ್ಯಾಸವನ್ನು ಹೋಲುವ ಇನ್ನೊಂದು ಕಲ್ಲಿನ ಕಟ್ಟಡವಿದೆ. ಇದು ಹಿಂದೆ ಮೈಳಬೇಶ್ವರನೆಂದು ಹೆಸರಾಗಿದ್ದ  ಸೋಮೇಶ್ವರ ಶಿವ ದೇವಾಲಯ. ಈ ದೇಗುಲವು ಮಂಟಪ, ಅಂತರಾಳ ಮತ್ತು ಗರ್ಭಗೃಹಗಳನ್ನು ಹೊಂದಿದ್ದು ಅಂತರಾಳದ ಬಾಗಿಲಿನ ಎರಡೂ ಕಡೆಗಳಲ್ಲಿ ಕಲ್ಲಿನಲ್ಲಿ ಕೊರೆದು ಮಾಡಿರುವ ಸಣ್ಣ ಸುಂದರ ಜಾಲಂಧ್ರಗಳಿವೆ. ಶಿಖರವಿಲ್ಲದಿದ್ದರೂ ತನ್ನ ಶ್ರೇಷ್ಠತೆಯನ್ನು ಸಾರುವ ಸಾಲಿಗೆ ಸೇರುವ ಈ ದೇಗುಲಕ್ಕೆ ದೊಡ್ಡಬಸಪ್ಪನಿಗೆ ಸಿಕ್ಕಿರುವಷ್ಟು ಪಾಲನೆ, ಪೋಷಣೆ ಸಿಕ್ಕಿರುವಂತಿಲ್ಲ.

## ಕಲ್ಮೇಶ್ವರ ದೇವಾಲಯ

ಸೋಮೇಶ್ವರ ದೇವಾಲಯದಿಂದ ತೋಟಗಳ ನಡುವೆ ತುಸು ದೂರ ಸಾಗಿದರೆ ಜೀರ್ಣಾವಸ್ಥೆಯಲ್ಲಿ ಉಳಿದಿರುವ ಮತ್ತೊಂದು ಶಿವ ದೇವಾಲಯ ಕಾಣಸಿಗುತ್ತದೆ. ಅದರ ಬಾಗಿಲುವಾಡದ ಸುತ್ತ ಇರುವ 3 ತೋಳುಗಳ ಕೆತ್ತನೆಗಳನ್ನು ನೋಡಿದರೆ ಈ ದೇವಾಲಯವೂ ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ನಿರ್ಧರಿಸುವುದು ಕಷ್ಟವಾಗುವುದಿಲ್ಲ. ಇದನ್ನು ಶಾಸನಗಳಲ್ಲಿ ಮತ್ತು ದಿನಬಳಕೆಯಲ್ಲಿ ಕಲ್ಮೇಶ್ವರ ಅಥವಾ ಸಿದ್ದೇಶ್ವರ ದೇವಾಲಯವೆಂದು ಉಲ್ಲೇಖಿಸಿರುವುದುಂಟು.

ಈ ದೇಗುಲದ ಗರ್ಭಗುಡಿ ಮತ್ತು ಶಿವಲಿಂಗ ಮಾತ್ರ ಉಳಿದಿದ್ದು, ಇನ್ನಿತರ ವಿವರಗಳು ಕಾಣಸಿಗುವುದಿಲ್ಲ. ಈ ಆಲಯದ ಹತ್ತಿರದಲ್ಲಿ ಅಗಲವಾದ ಕಲ್ಲಿನ ಬಾವಿ ಗಮನ ಸೆಳೆಯುತ್ತದೆ. ಸೌಂದರ್ಯದ ಖನಿಯಾಗಿರುವ ಈ ಬಾವಿಯನ್ನು ಸ್ಥಳೀಯರು 'ಜಪದ ಬಾವಿ' ಎಂದು ಕರೆಯುತ್ತಾರೆ.

ಪಶ್ಚಿಮ ಚಾಲುಕ್ಯ ವಾಸ್ತುಶಿಲ್ಪದ ಪ್ರಮುಖ ವೈಶಿಷ್ಟ್ಯಗಳಲ್ಲೊಂದು ಕೆಲವೆಡೆ ದೇವಾಲಯಗಳ ಹತ್ತಿರ ಅವರು ಕಟ್ಟಿಸಿರುವ ದೊಡ್ಡ ಸೋಪಾನದ ಬಾವಿಗಳು. ಇವುಗಳನ್ನು ಗುಜರಾತ್, ಮಹಾರಾಷ್ಟ್ರಗಳಲ್ಲಷ್ಟೇ ಅಲ್ಲದೆ ಉತ್ತರ ಕರ್ನಾಟಕದಲ್ಲಿಯೂ ಲಕ್ಕುಂಡಿಯ ಮಾಣಿಕೇಶ್ವರ ದೇವಾಲಯದ ಹತ್ತಿರವಿರುವ ಮುಸುಕಿನ ಬಾವಿಯ ವೈಭವದಲ್ಲಿ ಕಾಣಬಹುದು. ಇದೇ ಪಟ್ಟಿಗೆ ಸೇರ್ಪಡೆಯಾಗುವ ಅರ್ಹತೆ ಹೊಂದಿರುವ ಸುಂದರ ಮತ್ತು ಸರಳ ಕಟ್ಟಡ ಡಂಬಳದ ಜಪದ ಬಾವಿ.

ಅಧ್ಯಯನಗಳ ಪ್ರಕಾರ, 32 ಅಡಿ ಅಗಲ, 76 ಅಡಿ ಉದ್ದ ಮತ್ತು 24 ಅಡಿ ಆಳವಿರುವ ಈ ಬಾವಿಯನ್ನು ಪ್ರವೇಶಿಸಲು ಮೆಟ್ಟಿಲುಗಳನ್ನು ಪೂರ್ವ ದಿಕ್ಕಿನಿಂದ ನಿರ್ಮಿಸಲಾಗಿದೆ. ಬಾವಿಯ ಒಳಭಾಗದಲ್ಲಿ ಸುತ್ತಲೂ ಅಂದವಾಗಿ ಕೊರೆದಿರುವ ಗೂಡುಗಳಿದ್ದು ಇವುಗಳನ್ನು ಜಪಮಂಟಪಗಳೆಂದು ಪರಿಗಣಿಸಲಾಗಿದೆ. ಶೈವ ಮುನಿಗಳು ಬೆಳಗಿನ ಜಾವ ಬಾವಿಯ ನೀರಿನಲ್ಲಿ ಮಿಂದು ಜಪತಪಗಳನ್ನು ಆಚರಿಸಲು ಈ ಮಂಟಪಗಳನ್ನು ಉಪಯೋಗಿಸಿರಬಹುದೆಂದೂ, ಆ ಕಾರಣದಿಂದಲೇ ಈ ಬಾವಿಗೆ 'ಜಪದ ಬಾವಿ' ಎಂಬ ಹೆಸರು ಬಂದಿರಬಹುದೆಂದೂ ಊಹಿಸಬಹುದು.